# ಪಾಸ್‌ಪೋರ್ಟ್ ಇನ್ನು ಸಲೀಸು

**ಐವತ್ತು ವರ್ಷಗಳಷ್ಟು ಹಳೆಯದಾದ ಪಾಸ್‌ಪೋರ್ಟ್ ನೀಡುವ ವ್ಯವಸ್ಥೆಯಲ್ಲಿ ಬದಲಾವಣೆ ತರುವ ದೃಷ್ಟಿಯಿಂದ ಹೈಟೆಕ್ ಪಾಸ್‌ಪೋರ್ಟ್ ಸೇವಾ ಕೇಂದ್ರಗಳನ್ನು ಬೆಂಗಳೂರು ಸೇರಿದಂತೆ ದೇಶದ 77 ಸ್ಥಳಗಳಲ್ಲಿ ಸ್ಥಾಪಿಸಲಾಗಿದೆ. ಈಗ ಪಾಸ್‌ಪೋರ್ಟ್ ಪಡೆಯುವುದು ಸುಲಭ, ಸರಳ ಹಾಗೂ ಶೀಘ್ರ.**



ಪ್ರಾದೇಶಿಕ ಪಾಸ್‌ಪೋರ್ಟ್ ಕಚೇರಿ ಅಥವಾ ಬೆಂಗಳೂರು ಒನ್‌ನಲ್ಲಿ ಪಾಸ್‌ಪೋರ್ಟ್ ಅರ್ಜಿ ಸಲ್ಲಿಸುವ ತಾಪತ್ರಯ ಇನ್ನಿಲ್ಲ. ಏಕೆಂದರೆ ಇದಕ್ಕೆಂದೇ ಎರಡು ಪಾಸ್‌ಪೋರ್ಟ್ ಸೇವಾ ಕೇಂದ್ರಗಳು (ಪಿಎಸ್‌ಕೆ) ನಗರದಲ್ಲಿ ಕಾರ್ಯಾರಂಭ ಮಾಡಿವೆ.

ಲಾಲ್‌ಬಾಗ್ ರಸ್ತೆ ಹಾಗೂ ಮಾರತ್‌ಹಳ್ಳಿಯೊಂದಿಗೆ ದೇಶದ ಏಳು ಕೇಂದ್ರಗಳಲ್ಲಿ ಪಿಎಸ್‌ಕೆಗಳು ಈಗ ಪ್ರಾಯೋಗಿಕ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿವೆ. ಮೂರು ತಿಂಗಳ ನಂತರ ದೇಶದಲ್ಲಿ ಒಟ್ಟು 77 ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಕಾರ್ಯಾರಂಭ ಮಾಡಲಿವೆ. ಕಡತಗಳ ರೂಪದಲ್ಲಿದ್ದ ಪಾಸ್‌ಪೋರ್ಟ್ ಕಾರ್ಯ ವಿಧಾನ ಹಾಗೂ ಮಾಹಿತಿಗೆ ಡಿಜಿಟಲ್ ರೂಪ ನೀಡುವ ಮೊದಲ ಹೆಜ್ಜೆ ಇದು.

ತುಸು ಹಿಂದೆ ಹೋದರೆ, 1958ರಿಂದ 2006ರ ಅವಧಿಯಲ್ಲಿ ಪಾಸ್‌ಪೋರ್ಟ್ ವಿತರಣೆ ಪ್ರಮಾಣ 133 ಪಟ್ಟು ಹೆಚ್ಚಾಗಿದೆ. 2006 ರಿಂದ 2010 ರಲ್ಲಿ ಈ ಸಂಖ್ಯೆ ದುಪ್ಪಟ್ಟಾಗಿದೆ. ಇದೇ ಏರಿಕೆಯನ್ನು ಅಂದಾಜಿಸಿದರೆ 2011ರ ವೇಳೆಗೆ ಪಾಸ್‌ಪೋರ್ಟ್‌ಗೆ ಬೇಡಿಕೆ ಶೇ 18 ರಷ್ಟು ಹೆಚ್ಚಬಹುದು.

ಹೀಗಾಗಿ ಶೀಘ್ರವಾಗಿ ಪಾಸ್‌ಪೋರ್ಟ್ ಅರ್ಜಿಗಳ ವಿತರಣೆ, ಹಳೆಯ ಪಾಸ್‌ಪೋರ್ಟ್‌ಗಳಿಗೆ ಸಂಬಂಧಿಸಿದಂತೆ ಇತರ ಸೇವೆಗಳನ್ನು ತ್ವರಿತಗತಿಯಲ್ಲಿ ನೀಡಲು ಪಾಸ್‌ಪೋರ್ಟ್ ಸೇವಾ ಕೇಂದ್ರಗಳ ಸ್ಥಾಪನೆ ಅನುಕೂಲವಾಗಲಿದೆ ಎನ್ನುವುದು ವಿದೇಶಾಂಗ ಖಾತೆಯ ಅಭಿಮತ.

ನೂತನ ಪಾಸ್‌ಪೋರ್ಟ್ ಸೇವಾ ಯೋಜನೆಗಾಗಿ ವಿದೇಶಾಂಗ ಖಾತೆ, ರಾಷ್ಟ್ರೀಯ ಸ್ಮಾರ್ಟ್ ಆಡಳಿತ ಸಂಸ್ಥೆ (ಎನ್‌ಐಎಸ್‌ಜಿ)ಯನ್ನು ಸಲಹಾ ಸಂಸ್ಥೆಯನ್ನಾಗಿ ನೇಮಿಸಿತು. ಈ ಯೋಜನೆಯ ಸಂಪೂರ್ಣ ಅಧ್ಯಯನ (ಜುಲೈ 2006ರಿಂದ ಏಪ್ರಿಲ್ 2007)ದ ನಂತರ ಆಗಸ್ಟ್ 2007ರಲ್ಲಿ ಕೇಂದ್ರ ಸರ್ಕಾರ ನೂತನ ಯೋಜನೆಗೆ ಹಸಿರು ನಿಶಾನೆ ತೋರಿಸಿತು. ನಂತರ ಯೋಜನೆಯ ಹೊಣೆಗಾರಿಕೆಯಲ್ಲಿ ಯಶಸ್ವಿ ಬಿಡ್ಡರ್ ಎನಿಸಿಕೊಂಡ ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ (ಟಿಸಿಎಸ್) ಸಾಫ್ಟ್‌ವೇರ್ ಅಭಿವೃದ್ಧಿ ಹಾಗೂ ಅದರ ಕಾರ್ಯ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿತು. ಇದಕ್ಕಾಗಿ ಇ-ಆಡಳಿತ ಯೋಜನೆಯಡಿ ಸಾವಿರ ಕೋಟಿ ರೂಪಾಯಿಯ ಒಪ್ಪಂದ ಮಾಡಿಕೊಂಡಿದೆ ಎಂಬುದು ಈಗಾಗಲೇ ಪತ್ರಿಕೆಗಳಲ್ಲಿ ವರದಿಯಾಗಿದೆ.

ಈ ಯೋಜನೆಯಲ್ಲಿ ಟಿಸಿಎಸ್ ಕಂಪೆನಿಯು ಸಾಫ್ಟ್‌ವೇರ್, ಹಾರ್ಡ್‌ವೇರ್ ಮೂಲಸೌಕರ್ಯ ಇತ್ಯಾದಿ ನೀಡಿದರೆ, ಇದರ ಅಂಗ ಸಂಸ್ಥೆಯಾಗಿರುವ ಸಿಎಂಸಿ ಮಾನವ ಸಂಪನ್ಮೂಲ, ಪಿಎಸ್‌ಕೆ ಕಚೇರಿಯ ನಿರ್ವಹಣೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದೆ.

**ಏನೆಲ್ಲ ಬದಲಾವಣೆ:** ಹೀಗಾಗಿ ಪಾಸ್‌ಪೋರ್ಟ್ ಸೇವಾ ಕೇಂದ್ರಗಳು ಸರ್ಕಾರಿ ಕಚೇರಿಯ ಬದಲಾಗಿ ಕಾರ್ಪೊರೇಟ್ ರೂಪ ಪಡೆದುಕೊಂಡಿವೆ. ದೇಶದ 77 ಪಿಎಸ್‌ಕೆಗಳೂ ಒಂದೇ ಮಾದರಿಯಲ್ಲಿ ಒಂದೇ ಬಗೆಯ ವಿನ್ಯಾಸಗಳನ್ನು ಹೊಂದಿವೆ.

ಪಾಸ್‌ಪೋರ್ಟ್ ಕಚೇರಿಗಳಲ್ಲಿ ಈಗ ಉದ್ದನೆಯ ಸಾಲಿಲ್ಲ. ಬದಲಿಗೆ ಟೋಕನ್ ವ್ಯವಸ್ಥೆ ಇದೆ. ಟೋಕನ್ ಪಡೆದು ತಮ್ಮ ಸಂಖ್ಯೆಗಾಗಿ ನಿಂತು ಕಾಯಬೇಕಿಲ್ಲ. ಅದಕ್ಕಾಗಿ ಸುಂದರ ಆಸನಗಳಿವೆ. ಸಂಪೂರ್ಣ ಹವಾನಿಯಂತ್ರಿತ ಆವರಣ, ಆರಾಮ ಆಸನಗಳು, ಹೊಸ ಬಗೆಯ ಕೌಂಟರ್‌ಗಳು, ಅತ್ಯಾಧುನಿಕ ಗಣಕಯಂತ್ರ ಹಾಗೂ ಅದರ ಉಪಕರಣಗಳು, ಆತಿಥ್ಯ ಹಾಗೂ ಉಪಚಾರ ಎಲ್ಲವೂ ಕಾರ್ಪೊರೇಟ್ ಕಚೇರಿಯ ಅನುಭವ ನೀಡುತ್ತದೆ.

ಟೋಕನ್ ಸಂಖ್ಯೆ ಪರದೆ ಮೇಲೆ ಮೂಡಿದ 45 ನಿಮಿಷದೊಳಗೆ ಪಾಸ್‌ಪೋರ್ಟ್‌ನ ಅರ್ಜಿಯ ಎಲ್ಲಾ ಕೆಲಸಗಳನ್ನೂ ಮುಗಿಸಿ ಹೊರ ಬರಬಹುದು. ಆನ್‌ಲೈನ್ ಮೂಲಕವೂ ಅರ್ಜಿ ಭರ್ತಿ ಮಾಡಿ ಟೋಕನ್ ಪಡೆದರೆ ಸಮಯವನ್ನು ಮತ್ತಷ್ಟು ಉಳಿಸಬಹುದು.

ಈ ಹಿಂದೆ ಪಾಸ್‌ಪೋರ್ಟ್ ಪಡೆಯಲು ಅಂಚೆ ಕಚೇರಿಗೋ ಅಥವಾ ಬೆಂಗಳೂರು ಒನ್ ಕೇಂದ್ರಕ್ಕೋ ಹೋಗಿ ಅರ್ಜಿ ಸಲ್ಲಿಸಬೇಕಿತ್ತು. ಅಲ್ಲಿ ಸಲ್ಲಿಸಿದ ಅರ್ಜಿ ಪಾಸ್‌ಪೋರ್ಟ್ ಕಚೇರಿಗೆ ಹೋಗುತ್ತಿತ್ತು. ಇದರಿಂದ ಸಾಕಷ್ಟು ಸಮಯ ಹಿಡಿಯುತ್ತಿತ್ತು. ಈಗ ಇದಕ್ಕೆ ಕಡಿವಾಣ ಬಿದ್ದಿದೆ. ಅರ್ಜಿ ಸಲ್ಲಿಸಿ, ಪೊಲೀಸ್ ಪರಿಶೀಲನೆ ವರದಿ ಬಂದ ಕೇವಲ ಮೂರು ದಿನಗಳೊಳಗಾಗಿ ಪಾಸ್‌ಪೋರ್ಟ್ ಕೈಸೇರುವುದು ಪಿಎಸ್‌ಕೆಯ ಅನುಕೂಲಗಳಲ್ಲೊಂದು. ಇದಕ್ಕಾಗಿ ನಗರ ಪೊಲೀಸ್ ಆಯುಕ್ತ ಶಂಕರ್ ಬಿದರಿ ಕೂಡಾ ಶೀಘ್ರವಾಗಿ ಪೊಲೀಸ್ ಪರಿಶೀಲನೆ ನಡೆಸುವುದಾಗಿ ಇತ್ತೀಚೆಗೆ ತಿಳಿಸಿದ್ದಾರೆ.

**ಹೇಗೆ ಕಾರ್ಯ ನಿರ್ವಹಿಸುತ್ತವೆ?:** ಪಿಎಸ್‌ಕೆ ಕಚೇರಿ ಆವರಣದಲ್ಲೇ 10 ರೂಪಾಯಿಗಳಿಗೆ ಅರ್ಜಿ ಸಿಗುತ್ತದೆ. ಕಚೇರಿಯ ಮೊದಲನೇ ಸಭಾಂಗಣದಲ್ಲಿ ತಲಾ ಮೂರು ಸಂದರ್ಶನ ಕೌಂಟರ್ ಹಾಗೂ ಟೋಕನ್ ನೀಡುವ ಕೌಂಟರ್‌ಗಳಿವೆ. ಪಾಸ್‌ಪೋರ್ಟ್‌ನ ಸದ್ಯದ ಸ್ಥಿತಿ ಹಾಗೂ ಇನ್ನಿತರ ಮಾಹಿತಿಗಾಗಿ ಗಣಕೀಕೃತ ಮಾಹಿತಿ ಕಿಯೋಸ್ಕ್‌ಗಳಿವೆ. ಜತೆಗೆ ಅರ್ಜಿ ತುಂಬುವ ಡೆಸ್ಕ್ ಕೂಡಾ ಇದೆ.

ಸಾಮಾನ್ಯ ಪಾಸ್‌ಪೋರ್ಟ್, ಪಿಸಿಸಿ (ಪೊಲೀಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್), ತತ್ಕಾಲ್‌ಗಳಿಗೆ ಬೇರೆ ಬೇರೆ ರೀತಿಯ ಟೋಕನ್‌ಗಳನ್ನು ನೀಡಲಾಗುತ್ತದೆ. ಹೀಗೆ ನೀಡಿದ ಟೋಕನ್‌ನಲ್ಲಿ ಅರ್ಜಿದಾರರ ಸಂಕ್ಷಿಪ್ತ ಮಾಹಿತಿ ಹಾಗೂ ಬಾರ್‌ಕೋಡ್ ಇರುತ್ತದೆ. ಇದನ್ನು ಪ್ರವೇಶ ದ್ವಾರದಲ್ಲಿರುವ ಸೆನ್ಸರ್‌ಗೆ ತೋರಿಸಿದಲ್ಲಿ ಮಾತ್ರ ಬಾಗಿಲು ತೆರೆಯುತ್ತದೆ.

ಹಿರಿಯ ನಾಗರಿಕರಿಗೆ, ಪುಟ್ಟ ಮಕ್ಕಳಿರುವ ತಾಯಂದಿರಿಗೆ, ಅಂಗವಿಕಲರಿಗೆ ಹಾಗೂ ಅತಿ ಗಣ್ಯರಿಗೆ ಪ್ರತ್ಯೇಕ ಪ್ರವೇಶ ದ್ವಾರವಿದೆ. ಹೊಸ ವ್ಯವಸ್ಥೆಯಲ್ಲಿ ಅರ್ಜಿದಾರರು ಹಿರಿಯರಿರಲಿ ಅಥವಾ ಕಿರಿಯರಿರಲಿ ಉಪಸ್ಥಿತಿ ಕಡ್ಡಾಯ.

ಇಲ್ಲಿ ಮತ್ತೊಂದು ಬೃಹತ್ ಪ್ರಾಂಗಣವಿದೆ. ಒಮ್ಮೆಲೆ 250 ಅರ್ಜಿದಾರರು ಆಸೀನರಾಗಬಹುದು. ಜತೆಗೆ ಕಾಫೀ ಕೇಂದ್ರ ಹಾಗೂ ಜೆರಾಕ್ಸ್ ಯಂತ್ರಗಳಿವೆ. ಟೋಕನ್ ಸಂಖ್ಯೆಗಳ ಸದ್ಯದ ಸ್ಥಿತಿಗಳನ್ನು ತಿಳಿಸಲು ಐದು ಎಲ್‌ಸಿಡಿ ಪರದೆಗಳಿವೆ. ಜತೆಗೆ ಅರ್ಜಿ ಹಾಗೂ ದಾಖಲಾತಿಗಳ ಕುರಿತು ಯಾವುದೇ ರೀತಿ ಪ್ರಶ್ನೆಗಳಿಗೆ ಉತ್ತರಿಸಲು ಇಲ್ಲಿ ಅಧಿಕಾರಿಗಳಿರುತ್ತಾರೆ.

ಟೋಕನ್ ಸಂಖ್ಯೆ ಪರದೆ ಮೇಲೆ ಮೂಡಿದ ತಕ್ಷಣ ಮುಂದಿನ ಕೊಠಡಿಗೆ ಪ್ರವೇಶ. ಅಲ್ಲಿ ಎ, ಬಿ ಹಾಗೂ ಸಿ ಎಂಬ ಮೂರು ಮುಖ್ಯ ಕೌಂಟರ್‌ಗಳಿವೆ. 23 ಕೌಂಟರ್‌ಗಳಿರುವ 'ಎ' ಕೌಂಟರ್‌ನಲ್ಲಿ ಡಾಟಾ ನಮೂದಿಸುತ್ತಾರೆ. ಇವರೆಲ್ಲ ಸಿಎಂಸಿ ಸಿಬ್ಬಂದಿ. ಅರ್ಜಿಯನ್ನು ಪರಿಶೀಲಿಸಿ ಕಂಪ್ಯೂಟರ್‌ನಲ್ಲಿ ದಾಖಲಿಸುತ್ತಾರೆ.

ಇಲ್ಲಿ ಇವರಿಗೆ ಹಾಗೂ ಅರ್ಜಿದಾರರಿಗೆ ದಾಖಲಾತಿ ಕಾಣಿಸುವ ಸಲುವಾಗಿ ಎರಡು ಕಂಪ್ಯೂಟರ್ ಪರದೆಗಳು, ಡಿಜಿಟಲ್ ಕ್ಯಾಮೆರಾ, ಕೈ ಬೆರಳುಗಳ ಮುದ್ರೆ ಸಂಗ್ರಹಿಸುವ ಸಾಧನ, ಸ್ಕ್ಯಾನರ್ ಹಾಗೂ ಫೋಟೊ ಪ್ರತಿ ಯಂತ್ರಗಳಿವೆ. ಅರ್ಜಿ ದಾಖಲಾದ ನಂತರ ಹಣವನ್ನು ನಗದು ರೂಪದಲ್ಲಿ ಪಾವತಿ ಮಾಡಬಹುದು ಇಲ್ಲವೇ ಡೆಬಿಟ್ ಅಥವಾ ಕ್ರೆಡಿಟ್ ಕಾರ್ಡ್ ಮೂಲಕ ಮಾಡಬಹುದು. ಕಾರ್ಡ್ ನೀಡುವುದೇ ಆದಲ್ಲಿ ಅದು ಆ ವ್ಯಕ್ತಿ ಅಥವಾ ಪಾಸ್‌ಪೋರ್ಟ್‌ನಲ್ಲಿ ನಮೂದಿಸಿರುವ ಕುಟುಂಬದ ಸದಸ್ಯನದ್ದೇ ಆಗಿರಬೇಕು.

ಬಿ ಹಾಗೂ ಸಿ ಕೌಂಟರ್‌ಗಳಲ್ಲಿ ವಿದೇಶಾಂಗ ವ್ಯವಹಾರ ಇಲಾಖೆ ಅಧಿಕಾರಿಗಳಿರುತ್ತಾರೆ. ಅರ್ಜಿ ದಾಖಲಾಗಿ ಹಣ ಪಾವತಿಸಿದ ನಂತರ ಅರ್ಜಿದಾರರು ಮುಂದಿನ ಅಂದರೆ 'ಬಿ' ಕೌಂಟರ್ ಬಳಿ ಹೋಗಬೇಕು. 8 ಬಿ ಕೌಂಟರ್‌ಗಳಲ್ಲಿ ಪರಿಶೀಲನಾ ಅಧಿಕಾರಿಗಳಿರುತ್ತಾರೆ. ಇವರು ಅರ್ಜಿ ಹಾಗೂ ಲಗತ್ತಿಸಿರುವ ದಾಖಲಾತಿಗಳನ್ನು ಪರಿಶೀಲಿಸುತ್ತಾರೆ.

ನಂತರ ಸಿ ಕೌಂಟರ್ ಅಂದರೆ ಗ್ರಾಂಟಿಂಗ್ ಆಫೀಸರ್ ಬಳಿ ಅರ್ಜಿ ಹೋಗುತ್ತದೆ. ನಾಲ್ಕು ಮಂದಿ ಗ್ರಾಂಟಿಂಗ್ ಆಫೀಸರ್‌ಗಳಿದ್ದಾರೆ. ಇಲ್ಲಿ ಇಂಡೆಕ್ಸ್ ಚೆಕ್ ಹಾಗೂ ಪ್ಯಾಕ್ ಚೆಕ್ ಎಂಬ ಎರಡು ಬಗೆ ಪರಿಶೀಲನೆ ನಡೆಯುತ್ತದೆ. ಇಂಡೆಕ್ಸ್ ಚೆಕ್ ಎಂದರೆ ಅರ್ಜಿದಾರರ ಹೆಸರು, ವಯಸ್ಸು, ತಂದೆಯ ಹೆಸರು ಹಾಗೂ ಹುಟ್ಟಿದ ದಿನಾಂಕದಂಥ ಮಾಹಿತಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಹೊಂದಾಣಿಕೆಯಾಗುತ್ತಿದೆಯೇ ಎಂದು ಪರಿಶೀಲಿಸಲಾಗುತ್ತದೆ. ಪ್ಯಾಕ್ ಚೆಕ್‌ನಲ್ಲಿ ಅರ್ಜಿದಾರರ ವಿರುದ್ಧ ಯಾವುದಾದರೂ ಕ್ರಿಮಿನಲ್ ಮೊಕದ್ದಮೆ ಅಥವಾ ಸಮಾಜ ಘಾತುಕ ದೂರುಗಳಿವೆಯೇ ಎಂಬುದನ್ನು ಪರಿಶೀಲನೆ ಮಾಡಲಾಗುತ್ತದೆ. ಇವೆಲ್ಲವೂ ಮುಗಿದಲ್ಲಿ ಎಕ್ಸಿಟ್ ಟೋಕನ್ ಪಡೆದು ಹೊರ ಬರಬಹುದು.

ವಿಐಪಿಗಳಿಗೆ (ಅತಿ ಗಣ್ಯರಿಗೆ) ಪಿಎಸ್‌ಕೆಯಲ್ಲಿ ವಿಶೇಷ ಕೊಠಡಿ ಇದೆ. ಇವರಿಗೆ ಎಲ್ಲಾ ಸೇವೆಯೂ ಅಲ್ಲಿಯೇ ಲಭ್ಯ.

'ಸಾಮಾನ್ಯ ಅರ್ಜಿಯಾದರೆ ಆ ತಕ್ಷಣವೇ ಅದನ್ನು ಅಂತರ್ಜಾಲದ ಮೂಲಕ ಆಯಾ ಜಿಲ್ಲಾ ಪೊಲೀಸ್ ಮುಖ್ಯ ಕಚೇರಿಗೆ ಕಳುಹಿಸಲಾಗುತ್ತದೆ. ತತ್ಕಾಲ್ ಅರ್ಜಿಯಾಗಿದ್ದಲ್ಲಿ ಕೂಡಲೇ ಅಂತರ್ಜಾಲದ ಮೂಲಕ ಮುದ್ರಣ ಕೇಂದ್ರಕ್ಕೆ ಕಳುಹಿಸಲಾಗುತ್ತದೆ. ಒಂದೊಮ್ಮೆ ಸ್ಥಳೀಯ ಮುದ್ರಣ ಕೇಂದ್ರವು ಅನಿವಾರ್ಯ ಕಾರಣಗಳಿಂದ ಸ್ಥಗಿತಗೊಂಡಿದ್ದರೆ ದೆಹಲಿಯ ಮುಖ್ಯ ಮುದ್ರಣ ಕೇಂದ್ರಕ್ಕೆ ರವಾನೆಯಾಗಿ ಅಲ್ಲಿ ಮುದ್ರಣವಾಗುತ್ತದೆ. ತತ್ಕಾಲ್ ಅರ್ಜಿಯಾಗಿದ್ದಲ್ಲಿ ಕೇವಲ ಮೂರು ದಿನದೊಳಗಾಗಿ ಪಾಸ್‌ಪೋರ್ಟ್ ಸಿಗಲಿದೆ' ಎಂದೆನ್ನುತ್ತಾರೆ ಸಿಎಂಸಿ ಸಂಸ್ಥೆಯ ಗ್ರಾಹಕ ಸೇವಾ ವಿಭಾಗದ ಐಟಿ ವ್ಯವಸ್ಥಾಪಕ ವಿ.ಸ್ವಾಮಿನಾಥನ್.

**ಆನ್‌ಲೈನ್‌ನಲ್ಲೇ:** ಈಗ ಎಲ್ಲವೂ ಆನ್‌ಲೈನ್ ಆದ ಕಾರಣ, ಒಬ್ಬ ವ್ಯಕ್ತಿಯ ಎಲ್ಲಾ ಮಾಹಿತಿಗಳು ಕ್ಷಣ ಮಾತ್ರದಲ್ಲಿ ಲಭಿಸುವುದರಿಂದ ಪಾಸ್‌ಪೋರ್ಟ್ ವಿತರಣೆ ತ್ವರಿತ ಗತಿಯಲ್ಲಾಗುತ್ತದೆ.

ಪೊಲೀಸ್ ಪರಿಶೀಲನೆಯಲ್ಲಿ ಹಿಂದಿನಂತೆ ಅರ್ಜಿಯಲ್ಲಿ ನಮೂದಿಸಿದ ವಿಳಾಸದಲ್ಲಿ ಅಭ್ಯರ್ಥಿ ಇಲ್ಲ ಎಂದು ಕಳುಹಿಸುವಂತಿಲ್ಲ. ಅದರ ಬದಲಾಗಿ, ಈಗ ಅವರು ಎಲ್ಲಿದ್ದಾರೆ ಎಂಬ ಮಾಹಿತಿಯನ್ನೂ ಪೊಲೀಸರು ನೀಡಬೇಕು. ಹೀಗೆ ಪೊಲೀಸ್ ಪರಿಶೀಲನೆಗೆ ಒಂದು ಅರ್ಜಿಗೆ ಈ ಹಿಂದೆ ವಿದೇಶಾಂಗ ಖಾತೆ ರಾಜ್ಯ ಸರ್ಕಾರಕ್ಕೆ ನೀಡುತ್ತಿದ್ದ 100 ರೂಪಾಯಿಗಳನ್ನು ಈಗ 150 ರೂಪಾಯಿಗೆ ಏರಿಸಲಾಗಿದೆ.

ಪಾಸ್‌ಪೋರ್ಟ್ ವಿಭಾಗ ಸಂಪೂರ್ಣ ಡಿಜಿಟೈಸೇಷನ್ ಆಗುವ ಹಾದಿಯಲ್ಲಿರುವುದರಿಂದ ಈಗಿರುವ ಪುಸ್ತಕ ಮಾದರಿಯ ಪಾಸ್‌ಪೋರ್ಟ್‌ಗಳು ಇನ್ನು ಕೆಲವೇ ವರ್ಷಗಳಲ್ಲಿ ಸ್ಮಾರ್ಟ್ ಕಾರ್ಡ್ ರೂಪ ಪಡೆಯಲಿವೆ. ಏಕೆಂದರೆ ಪದೆ ಪದೆ ಹೊರ ದೇಶಗಳಿಗೆ ಪ್ರಯಾಣ ಮಾಡುವವರ ಪಾಸ್‌ಪೋರ್ಟ್‌ಗಳ ಪುಟಗಳು ಅಧಿಕ ವಿಸಾ ಸ್ಟಾಂಪ್‌ನಿಂದಾಗಿ ಬೇಗ ಖಾಲಿಯಾಗುತ್ತವೆ. ಆದರೆ ಸ್ಮಾರ್ಟ್ ಕಾರ್ಡ್‌ನಲ್ಲಿ ಆ ತಾಪತ್ರಯ ಇಲ್ಲ.

**ಅರ್ಜಿಯ ರೂಪ:** ಹೊಸದಾಗಿ ಪಾಸ್‌ಪೋರ್ಟ್ ಅರ್ಜಿ ಸಲ್ಲಿಸುವವರು, ಪಾಸ್‌ಪೋರ್ಟ್ ನವೀಕರಿಸುವವರು ಹೊಸ ಮಾದರಿಯ ಅರ್ಜಿಯನ್ನು ಭರ್ತಿ ಮಾಡಬೇಕು. ಐಸಿಆರ್ ಎನೇಬಲ್ ಅರ್ಜಿ ಇದಾಗಿದ್ದು ಇದಕ್ಕೆ ಫೋಟೊ ಲಗತ್ತಿಸುವ ಅವಶ್ಯಕತೆ ಇಲ್ಲ. ಅರ್ಜಿಯನ್ನು ಕಚೇರಿಯಲ್ಲಿ ಇಲ್ಲವೇ ಆನ್‌ಲೈನ್ ಮೂಲಕ ಪಡೆಯಬಹುದು. ಶುಲ್ಕದಲ್ಲೂ ಯಾವುದೇ ಬದಲಾವಣೆ ಇಲ್ಲ.

ಸಂದರ್ಶನದ ವೇಳೆಯನ್ನು ಶುಲ್ಕ ರಹಿತ 1800 258 1800 ಸಂಖ್ಯೆಗೆ ಕರೆ ಮಾಡಿ ಅಥವಾ www.passportindia.gov.in ಜಾಲತಾಣಕ್ಕೆ ಭೇಟಿ ನೀಡಿ ಪಡೆಯಬಹುದಾಗಿದೆ.

■ ಇ.ಎಸ್. ಸುಧೀಂದ್ರ ಪ್ರಸಾದ್




ಟೋಕನ್ ನೀಡುವ ಕೌಂಟರ್



ಅಧಿಕಾರಿಗಳಿಂದ ಪಾಸ್‌ಪೋರ್ಟ್ ಡಾಟಾ ಪರಿಶೀಲನಾ ಕೌಂಟರ್‌ನ ಚಟುವಟಿಕೆಯ ವಿವರಣೆ